# ಆಹಾ ಸುದ್ದಿ!

★ ಸಸಿತೋಟ



ದಾಖಲೆಗಳನ್ನು ಮುರಿಯುವುದೆಂದರೆ ಜನ ಹೊಟ್ಟೆಯನ್ನೂ ಮರೆತು ಧಾವಿಸುತ್ತಾರೆ. ಇತ್ತೀಚೆಗೆ ಮೆಕ್ಸಿಕೋದಲ್ಲಿ 2,340 ಬಾಣಸಿಗರು ಹಾಗೂ ಮದ್ಯಶಾಲೆಯ ಮಾಣಿಗಳು ಬಾಣಲೆಗಳನ್ನು, ಮದಿರಾಪಾತ್ರೆಗಳನ್ನು ಹಿಡಿದೇ ನಗರದ ಮಧ್ಯಭಾಗಕ್ಕೆ ದಾಪುಗಾಲು ಹಾಕಿದರು. ಅತ್ತ ಅವರು ಗಿನ್ನೆಸ್ ರೆಕಾರ್ಡ್ ಮುರಿಯುತ್ತ ಇದ್ದರೆ, ಇತ್ತ ಹೋಟೆಲ್‌ಗಳಲ್ಲಿ ಖಾಲಿ ಹೊಟ್ಟೆ ಗಿರಾಕಿಗಳು ಖಾಲಿ ಪ್ಲೇಟ್- ಲೋಟ ಮುರಿಯುತ್ತ ಕೂತಿರಬಹುದು.



ರಷ್ಯಾದ ಸ್ಟಾವ್ರೊಪೋಲ್‌ನಲ್ಲಿ ಪ್ಯಾನ್‌ಕೇಕ್ ಹಬ್ಬ. ನಮ್ಮಲ್ಲಿಯ ದೋಸೆ ಮೇಳ ಇದ್ದ ಹಾಗೆ. ಒಂದು ಸಣ್ಣ ವ್ಯತ್ಯಾಸ. ಅಲ್ಲಿ ಪ್ಯಾನ್‌ಕೇಕ್‌ಗಳನ್ನು ಪುಕ್ಕಟೆ ಹಂಚಿದಷ್ಟೂ ಹಬ್ಬ ಮಾಡಿದವನಿಗೆ ಪುಣ್ಯದ ಲಾಭ, ಇಲ್ಲಿ ದೋಸೆ ಖಾಲಿಯಾದಷ್ಟೂ ಕಾವಲಿ ಏರಿಸಿದವನಿಗೆ ದುಡ್ಡಿನ ಲಾಭ.

ಭಾರತದ ಒಂದು ಕೋಟಿ ಮಂದಿ ಅಮೆರಿಕಾದಲ್ಲಿ ಕಾಯಂ ಆಗಿ ಉಳಿಯಲು ಬಯಸುತ್ತಾರಂತೆ. ಹೀಗೆಂದು ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯ ವರದಿ ಹೇಳಿದೆ. ಸುದ್ದಿ ಅದಲ್ಲ, ಉಳಿದ 123 ಕೋಟಿ (ಒಟ್ಟು ಜನಸಂಖ್ಯೆ 124 ಕೋಟಿ) ಭಾರತೀಯರು ಪ್ರಪಂಚದ ಅತ್ಯಂತ ಹೆಚ್ಚು ಅಪೇಕ್ಷಣೀಯ ಗಮ್ಯಸ್ಥಾನ ಅಮೆರಿಕಾದಲ್ಲಿ ಇರಲು ಇಷ್ಟಪಟ್ಟಿಲ್ಲವಲ್ಲ, ಅದು ಸ್ವಾರಸ್ಯಕರ ಸುದ್ದಿ.



ಮಾಸ್ಕೋ ಮೃಗಾಲಯದಲ್ಲಿರುವ ಎರಡು ತಲೆಗಳುಳ್ಳ ಅಪರೂಪದ ಹಾವು. ಇಂತಹ ಪ್ರಕರಣ 10 ಲಕ್ಷ ಹಾವುಗಳಲ್ಲಿ ಒಂದಂತೆ. ಭಾರತದಲ್ಲಿ ಸಿಕ್ಕಿದ್ದರೆ ಹಾಲು ಹುಯ್ಯಲು ಕ್ಯೂ ಇರುತ್ತಿತ್ತು. ಡಬಲ್ ಬಾಯಿಗೆ ಡಬಲ್ ಹಾಲಿನ ಪ್ಯಾಕೆಟ್‌ಗಳು.. ಅವುಗಳಿಗೆ ಡಬಲ್ ಬೆಲೆ.. ತಲಾ ಆದಾಯ ಹೆಚ್ಚಳದ ಅವಕಾಶ ಕೈ ತಪ್ಪಿ ಹೋಯಿತಲ್ಲ..!



ಅಮೆರಿಕದ ಶಾಲೆಗಳಲ್ಲಿ ಪುಟಾಣಿಗಳ ಮೇಲೆ ಎರ್ರಾಬಿರ್ರಿ ಗುಂಡು ಹಾರಿಸುವವರಿಂದ ರಕ್ಷಣೆಗೆಂದು ಗುಂಡು ನಿರೋಧಕ ಬ್ಯಾಗ್, ದುಪ್ಪಟಿಗಳನ್ನು ಸರ್ಕಾರ ವಿತರಿಸುತ್ತಿದೆಯಂತೆ. ಕ್ಷಿಪಣಿ ನಿರೋಧಕ ಉತ್ಪನ್ನಗಳನ್ನು ತಯಾರಿಸುವ ಸಂಸ್ಥೆಗೀಗ ಈ ಬ್ಯಾಗ್ ತಯಾರಿಸಿ ಮಕ್ಕಳಿಗೆ ತರಬೇತಿ ನೀಡುವ ಹೆಚ್ಚುವರಿ ಹೊಣೆ. ಕಂಡ ಕಂಡ ದೇಶಗಳಲ್ಲಿ ಗುಂಡು ಹೊಡೆಸಿ 'ರಕ್ಷಕ' ಎನಿಸಿಕೊಂಡಿದ್ದ ದೊಡ್ಡಣ್ಣ ಅಮೆರಿಕ ಪುಟಾಣಿಗಳ ರಕ್ಷಣೆಗೂ ಕ್ಷಿಪಣಿ ಕಂಪೆನಿಯನ್ನೇ ತಂದು ದೊಡ್ಡ ಕೆಲಸ ಮಾಡಿದೆ.

ತೈವಾನ್‌ನಲ್ಲಿ ಪೊಲೀಸರಿಗೆ ಬೇಕಾಗಿದ್ದ ಮಾದಕ ದ್ರವ್ಯಗಳ ವರ್ತಕ ವು ಎಂಬಾತ ಒಂದೇ ಒಂದು ಇಂಗ್ಲಿಷ್ ಶಬ್ದವಿರುವ ಟೀ ಷರ್ಟ್ ಧರಿಸಿ ಓಡಾಡುತ್ತಿದ್ದ. ಆಗಷ್ಟೇ ಬೇಸಿಕ್ ಇಂಗ್ಲಿಷ್ ಪರೀಕ್ಷೆ ಪಾಸ್ ಮಾಡಿಕೊಂಡಿದ್ದ ಪೊಲೀಸ್ ಅಧಿಕಾರಿಗೆ ಕಂಡ ಕಂಡ ಶಬ್ದಗಳನ್ನು ಓದುವ ಚಟ. ಆ ಶಬ್ದವನ್ನೂ ಓದಿಕೊಂಡು ವುನನ್ನು ಹಿಡಿದು ವಿಚಾರಿಸಿದರೆ ಮಾದಕ ದ್ರವ್ಯದ ಹೂರಣ ಹೊರಬಿತ್ತು. ಅಷ್ಟಕ್ಕೂ ಆ ಶಬ್ದ 'ವಾಂಟೆಡ್'. ಶಬ್ದದ ಅರ್ಥ ಗೊತ್ತಿದ್ದರೆ ಧರಿಸುತ್ತಿರಲಿಲ್ಲ ಎಂದು ವು ಈಗ ಪೇಚಾಡಿಕೊಳ್ಳುತ್ತಿದ್ದಾನಂತೆ ಕಂಬಿಗಳ ಹಿಂದೆ.